ಅಸಲು ದಾವಾ ನಂಃ**84/2021**
ಪಿ.ಡಬ್ಲ್ಯೂಃ **01**

**ದಿನಾಂಕಃ07-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ ಸಿ ಎಂ., 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದ**

ಪ್ರತಿವಾದಿ ಸಿ.ಟಿ.ತಿಪ್ಪಯ್ಯರವರು ಅಭಿಯಂತರರಾಗಿ ಕೆಲಸ ನಿರ್ವಹಿಸುತ್ತಿದ್ದರು. ದಾವಾ ಸ್ವತ್ತನ್ನು ಸಿ.ಟಿ.ತಿಪ್ಪಯ್ಯರವರು ಬಡಗಿ ಗಿರಿಯಪ್ಪರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಸಿ.ಟಿ.ತಿಪ್ಪಯ್ಯರವರು ಮೃತರಾಗಿ ಸುಮಾರು 20 ವರ್ಷ ಆಗಿರುತ್ತದೆ. ಸಿ.ಟಿ.ತಿಪ್ಪಯ್ಯರವರು ನಿವೃತ್ತಿ ಆಗುವವರೆಗೂ ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಕಡೆಗಳಲ್ಲಿ ವಾಸಿಸುತ್ತಿದ್ದರು. ಸದರಿಯವರಿಗೆ 4 ಜನ ಮಕ್ಕಳು. ಅವರುಗಳೆಂದರೆ ವೆಂಕಟರಮಣರಾಜು, ಸುಬ್ರಮ್ಮಣ್ಯ, ಮಂಜುನಾಥ, ಕೃಷ್ಣಮೂರ್ತಿ. ಸದರಿ 4 ಜನ ಈಗ ಜೀವಂತ ಇರುತ್ತಾರೆ ಆದರೆ ಅವರುಗಳನ್ನು ನಾನು ಎಂದಿಗೂ ನೋಡಿಲ್ಲ.

2. 1 ನೇ ಪ್ರತಿವಾದಿ ಪೌತಿಯಾಗಿ ಬಹಳ ವರ್ಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ನಾನು ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿಲ್ಲ. ದಿಃ22-06-2018 ರಂದು 1 ನೇ ಪ್ರತಿವಾದಿ ಪೌತಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಸುನಂದ, ತಿಲಕ್ ಮತ್ತು ರಾಜೇಶ ಎಂಬ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಾರಸುದಾರರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಪ್ರಯತ್ನ ಪಟ್ಟಿಲ್ಲ. 1 ನೇ ಪ್ರತಿವಾದಿ ವಾರಸುದಾರರು ದಾವೆಯ ಅವಶ್ಯಕ ಪಕ್ಷಗಾರರಾಗಿರುವುದರಿಂದ ಸದರಿಯವರನ್ನು ಸೇರಿಸದೆ ಇರುವ ಕಾರಣ ಸದರಿ ದಾವೆ ಊರ್ಜಿತವಾಗುವುದಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮೃತ ವ್ಯಕ್ತಿಯನ್ನು ಸೇರಿಸಿ ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿರಲಿಲ್ಲ. ಸದರಿ ಕಾರಣದಿಂದ ನನ್ನ ದಾವೆಯು ಊರ್ಜಿತವಾಗುವುದಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

3. ನನ್ನ ತಂದೆ ಮೃತರಾಗಿ 20 ವರ್ಷ ಆಗಿರುತ್ತದೆ. ಅವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಿ.ಟಿ.ತಿಪ್ಪಯ್ಯರವರನ್ನು ನಾನು ನೋಡಿರುತ್ತೇನೆ. ನಿಪಿಃ1 ರ ಕ್ರಯದ ಕರಾರು 1978 ರಲ್ಲಿ ಆಗಿರುತ್ತದೆ ಆದರೆ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಿಪಿಃ1 ನ್ನು

ಬರೆಯುವ ಕಾಲದಲ್ಲಿ ನಾನು ಹಾಜರಿದ್ದೆ. ನಿಪಿ:1 ಕ್ಕೆ ಸಾಕ್ಷಿದಾರರಾಗಿ ನಾಗರಾಜ ಎಂಬವರು ಸಹಿ ಮಾಡಿರುತ್ತಾರೆ. ಸದರಿಯವರು ಜಗಳೂರಿನವರು ಹಾಗೂ ಅವರ ಜೀವಂತ ಇರುವ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

4. ನಿಪಿ:1 ರ ಕ್ರಯದ ಕರಾರು ನನ್ನ ತಂದೆ ಎಚ್.ಬಿ.ಹೊನ್ನುರಪ್ಪ ಮತ್ತು ಸಿ.ಟಿ.ತಿಪ್ಪಯ್ಯರವರ ನಡುವೆ ಆಗಿರುತ್ತದೆ. ನನ್ನ ತಂದೆ ವ್ಯವಸಾಯ ವೃತ್ತಿ ಮಾಡುತ್ತಿದ್ದರು. ನನ್ನ ತಂದೆ ಜೀವಂತ ಇರುವ ತನಕ ನಮ್ಮ ಕುಟುಂಬದ ಯಜಮಾನಿಕೆ ಅವರೇ ನಡೆಸುತ್ತಿದ್ದರು. ನನ್ನ ತಂದೆಗೆ ವ್ಯವಸಾಯವನ್ನು ಹೊರತುಪಡಿಸಿ ಬೇರೆ ಆದಾಯ ಇಲ್ಲ. ನಮ್ಮ ಕುಟುಂಬಕ್ಕೆ ಸೇರಿದ 5 ಎಕರೆ ಜಮೀನು ಇರುತ್ತದೆ. ನಮ್ಮ ತಂದೆಯ ಹೆಸರಿಗೆ ಯಾವುದೇ ಆಸ್ತಿ ಇರಲಿಲ್ಲ.

5. ನನ್ನ ತಂದೆ-ತಾಯಿಗೆ ನಾವು 5 ಜನ ಮಕ್ಕಳು. ನಿಪಿ:1 ನ್ನು ಜಾರಿ ಮಾಡುವ ಕಾಲದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ 5 ಎಕರೆ ಜಮೀನಿನಿಂದ ಸಾಕಷ್ಟು ಆದಾಯ ಬರುತ್ತಿರಲಿಲ್ಲ ಎಂದರೆ ಸರಿ. ಸದರಿ ಜಮೀನಿನಿಂದ ನಾವು 5 ಜನ ಮಕ್ಕಳ ಪೋಷಣೆ ಕಷ್ಟ ಆಗುತ್ತಿತ್ತು ಎಂದರೆ ಸರಿ. ನಮ್ಮ ತಂದೆಯವರು ದಾವಾ ಸ್ವತ್ತನ್ನು ಸಿ.ಟಿ.ತಿಪ್ಪಯ್ಯರವರಿಂದ ಎಷ್ಟು ಮೊತ್ತಕ್ಕೆ ಕ್ರಯದ ಕರಾರನ್ನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಕ್ರಯದ ಸಂಬಂಧ ಆದ ವ್ಯವಹಾರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ:1 ರ ಕರಾರು ಚಳ್ಳಕೆರೆ ತಾಲ್ಲೂಕು ಕಚೇರಿಯಲ್ಲಿ ನಡೆದಿರುತ್ತದೆ. ನಿಪಿ:1 ರ ದಿನಾಂಕದಂದೇ ಮಾತುಕತೆ ಮತ್ತು ಕರಾರು ಜರುಗಿರುತ್ತದೆ. ಮಾತುಕತೆಯ ಸಮಯದಲ್ಲಿ ನಾನು, ಸಿ.ಟಿ.ತಿಪ್ಪಯ್ಯ, ನಮ್ಮ ತಂದೆ ಮತ್ತು ಬಿಕ್ಕಲಂದಾರರು ಹಾಜರಿದ್ದರು. ನಿಪಿ:1 ರ ಬಿಕ್ಕಲಂದಾರರು ಯಾರು ಎಂದು ನನಗೆ ಗೊತ್ತಿಲ್ಲ.

6. ಮಾತುಕತೆ ಸಮಯದಲ್ಲಿ ಒಟ್ಟಾಗಿ ಮೌಲ್ಯವನ್ನು ನಿರ್ಧರಿಸಿರುಸುತ್ತೇವೆ ಎಕರೆ ಪ್ರಕಾರವಾಗಿ ಅಲ್ಲ. ನಿಪಿ:1 ರ ಕರಾರಿನ ಕಾಲದಲ್ಲಿ ಸಿ.ಟಿ.ತಿಪ್ಪಯ್ಯರವರು ಯಾವುದೇ ದಾಖಲೆಗಳನ್ನು ತಂದಿಲ್ಲ. ನಿಪಿ:1 ರ ಪತ್ರವನ್ನು ಬರೆಯಲು ನಾನು ಮತ್ತು ನನ್ನ ತಂದೆ ಎಚ್ ಬಿ ಹೊನ್ನುರಪ್ಪರವರು ಮಾಹಿತಿ ನೀಡಿರುತ್ತೇವೆ. ನಿಪಿ:1 ರ ಪತ್ರವು ಎಷ್ಟು ರೂಪಾಯಿ ಛಾಪಾ ಕಾಗದದ ಮೇಲೆ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ:1 ನ್ನು ಬರೆದಿರುವ ಛಾಪಾ ಕಾಗದವನ್ನು ನನ್ನ ತಂದೆ ಖರೀದಿಸಿರುತ್ತಾರೆ. ನಿಪಿ:1 ರ ದಾಖಲೆಯು ಒಂದು ಹಾಳೆಯನ್ನು ಒಳಗೊಂಡಿದೆ. ನಿಪಿ:1 ರ ಬಿಕ್ಕಲಂದಾರರು ಈಗ ಜೀವಂತ ಇರುವುದಿಲ್ಲ ಮತ್ತು ನಿಪಿ:1 ರ ಸಾಕ್ಷಿದಾರರು ಜೀವಂತಿಕೆಯ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ.

7. ಸಿ.ಟಿ.ತಿಪ್ಪಯ್ಯರವರು ಅಭಿಯಂತರರಾಗಿ ಕೆಲಸ ನಿರ್ವಹಿಸುತ್ತಿದ್ದರಿಂದ ಬಹಳಷ್ಟು ಆದಾಯ ಇದ್ದು, ಅವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಆರ್ಥಿಕ ಅನಿವಾರ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ಸಿ.ಟಿ.ತಿಪ್ಪಯ್ಯರವರು ಜೀವಂತ ಇರುವ ಕಾಲಕ್ಕೆ ನನ್ನ ತಂದೆ ಎಚ್ ಬಿ ಹೊನ್ನುರಪ್ಪರವರು ಕ್ರಯಪತ್ರವನ್ನು ಮಾಡಿಕೊಡುವಂತೆ ಕೇಳಿಕೊಂಡಿರುತ್ತಾರೆ. ಸದರಿಯವರು ಕ್ರಯಪತ್ರವನ್ನು ಮಾಡಿಕೊಡಲಿಲ್ಲ. ಸಿ.ಟಿ.ತಿಪ್ಪಯ್ಯರವರು ಕ್ರಯಪತ್ರವನ್ನು ಮಾಡಿಕೊಡದ ಕಾರಣ ನನ್ನ ತಂದೆ ಎಚ್.ಬಿ.ಹೊನ್ನುರಪ್ಪರವರು ಯಾವುದೇ ದಾವೆಯನ್ನು ಹೂಡಿಲ್ಲ. ನನ್ನ ತಂದೆಯವರು ಪೌತಿಯಾದ ತಕ್ಷಣ ಸಿ.ಟಿ.ತಿಪ್ಪಯ್ಯರವರನ್ನು ಕ್ರಯಪತ್ರ ಮಾಡಿಕೊಡುವಂತೆ ಕೇಳಿಲ್ಲ ಯಾಕೆಂದರೆ ಅವರು ನನಗೆ ಸಿಕ್ಕಿರುವುದಿಲ್ಲ. ನನ್ನ ತಂದೆ ಪೌತಿಯಾದ ತಕ್ಷಣ ಸಿ.ಟಿ.ತಿಪ್ಪಯ್ಯರವರು ಸಿಗದಿದ್ದಾಗ ತಕ್ಷಣವಾಗಿ ದಾವೆಯನ್ನು ಹೂಡುವ ಪ್ರಯತ್ನವನ್ನು ನಾನು ಮಾಡಿಲ್ಲ.

8. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ತಿಪ್ಪೇಸ್ವಾಮಿಯವರ ಜಮೀನು ಇರುತ್ತದೆ. ದಾವಾ ಪತ್ರದಲ್ಲಿ ದಾವಾ ಷಡ್ಯೂಲಿನಲ್ಲಿ ದಕ್ಷಿಣ ದಿಕ್ಕಿಗೆ ಎಚ್ ಬಿ ಪ್ರಕಾಶರವರ ಜಮೀನು ಇರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿಃ11 ರಲ್ಲಿ ಕಾಣುವ ಸಮಾಧಿ ನನ್ನ ಮಾವ ಕೃಷ್ಣಮೂರ್ತಿಯವರದು. ಎಚ್ ಬಿ ಪ್ರಕಾಶರವರ ಜಮೀನಿನ ಸರ್ವೇ ನಂ.501. ನಿಪಿಃ11 ರಲ್ಲಿ ಕಾಣುವ ಸಮಾಧಿ ಸರ್ವೇ ನಂ.501 ರ ಜಮೀನಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವಾ ಸ್ವತ್ತಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಸಿ.ಟಿ.ತಿಪ್ಪಯ್ಯರವರ ಮರಣಾನಂತರ ಅವರ ಮಕ್ಕಳನ್ನು ದೂರವಾಣಿ ಮುಖಾಂತರ ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ. ಸದರಿ ವಿಚಾರವನ್ನು ದಾವಾ ಪೂರ್ವದ ನೋಟೀಸಿನಲ್ಲಿ ಮತ್ತು ದಾವಾ ಪತ್ರದಲ್ಲಿ ಬರೆಸಿರುತ್ತೇವೆ. ಸಿ.ಟಿ.ತಿಪ್ಪಯ್ಯರವರು ನನ್ನ ತಂದೆ ಎಚ್ ಬಿ ಹೊನ್ನುರಪ್ಪರವರಿಗೆ ಯಾವುದೇ ಕ್ರಯದ ಕರಾರು ಪತ್ರವನ್ನು ದಾವಾ ಸ್ವತ್ತಿನ ಸಂಬಂಧ ಬರೆದುಕೊಡದಿದ್ದರೂ ಸಹ ನಾನು ಮತ್ತು ಇತರೇ ವಾದಿಯರು ಷರೀಕಾಗಿ ನಿಪಿಃ1 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

10. ನಾನು ಕಳುಹಿಸಿರುವ ನೋಟೀಸ್ ಪ್ರತಿವಾದಿಯರಿಗೆ ಜಾರಿಯಾಗಿದ್ದು, ಸಾಕ್ಷಿಯು ಮುಂದುವರಿದು ಎಲ್ಲರಿಗೂ ಜಾರಿ ಆಗಿರುವುದಿಲ್ಲ, ಕೆಲವರಿಗೆ ಮಾತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.